# ಕನ್ನಡದಲ್ಲಿ ಮೀಸಲಾತಿ ಚಳವಳಿಯ ಇತಿಹಾಸ: ಒಂದು ಅವಲೋಕನ

ಅಂಜಿನಪ್ಪ ಎಲ್.ಟಿ.

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು.

DOI: https://doi.org/10.5281/zenodo.15580870

## ABSTRACT:

ಪ್ರಸ್ತುತ ಈ ಲೇಖನದಲ್ಲಿ ಭಾರತದಲ್ಲಿನ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಶೂದ್ರರು ಅನುಭವಿಸಿದ ಯಾತನೆಗಳು, ಹನ್ನೆರಡನೇ ಶತಮಾನದಲ್ಲಿ ಆದ ಸಾಮಾಜಿಕ ಕ್ರಾಂತಿಗಳು, ಸ್ವಾತಂತ್ರ ಪೂರ್ವದಲ್ಲಿನ ಮೀಸಲಾತಿ ಕ್ರಮಗಳು ನಂತರದ ಬೆಳವಣಿಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕೊಲ್ಲಾಪುರದ ಶಾಹುಮಹಾರಾಜರು ಹಿಂದುಳಿದವರಿಗೆ ಶೇಕಡ 50ರಷ್ಟು ಮೀಸಲಾತಿಯನ್ನು ಜಾರಿಗೆ ತಂದ ಮೊದಲ ಭಾರತೀಯ ರಾಜ ಎಂಬ ಹೆಗ್ಗಳಿಕೆ ಪಾತ್ರವಾದ ರೀತಿ ಹಾಗೂ ಅವರ ಕೈಗೊಂಡ ಕಾರ್ಯವೈಖರಿಗಳನ್ನು ಇಲ್ಲಿ ತಿಳಿಸಲಾಗಿದೆ.

ಜೊತೆಗೆ ನಾಲ್ವಡಿ ಕೃಷ್ಣರಾಜ ಒಡೆಯರು ಹಿಂದುಳಿದವರಿಗೆ ನೀಡಿದ ಕೊಡುಗೆಗಳು ಅವರ ಅಧಿಕಾರವಧಿಯಲ್ಲಿ ಜಾರಿಗೆ ತಂದ ಮಿಲ್ಲರ್ ಆಯೋಗ, ಮಿಲ್ಲರ್ ಆಯೋಗವು ಆ ಸಂದರ್ಭದಲ್ಲಿ ಅಧಿಕಾರಿಗಳಿಗೆ ನೀಡುತ್ತಿದ್ದ ತಾರತಮ್ಯ ಸಂಬಳದ ಸೌಲತ್ತುಗಳು ಇತರ ಸೌಲತ್ತುಗಳು ಹಾಗೂ ಆಯೋಗ ಕೈಗೊಂಡ ನಿರ್ಣಯವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಮುಂದೆ ದೇಶ್ಯಾದ್ಯಂತ ಹುಟ್ಟಿಕೊಂಡ ಒಕ್ಕೂಟಗಳು ಜಾತಿ ಸಂಘಟನೆಗಳು, ಸೈಮನ್ ಕಮಿಷನ್, ಡಾ. ಬಿ.ಆರ್. ಅಂಬೇಡ್ಕರ್ ಅವರು ದುಂಡು ಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿ ಅಸ್ಪೃಶ್ಯರ ಪರವಾಗಿ ಧ್ವನಿ ಎತ್ತಿ ಅದರಲ್ಲಿ ಸರ್ಕಾರ ಕೈಗೊಳ್ಳಬಹುದಾದ ಯೋಜನೆಗಳನ್ನು ಇಲ್ಲಿ ಸ್ಮರಿಸಲಾಗಿದೆ. ಮೈಸೂರು ಸಂಸ್ಥಾನದ ಕೊಡುಗೆ ಮಿಲ್ಲರ್ ಆಯೋಗದಿಂದ ಹಿಡಿದು ಕಾಕಾ ಕಾಲೇಲ್ಕರ್ ಆಯೋಗದ ವರದಿ, ನಾಗನಗೌಡನ ವರದಿ, ಹಿಂದುಳಿದ ವರ್ಗಗಳ ಬೈಬಲ್ ಎಂದೇ ಪ್ರಖ್ಯಾತವಾದ ಹಾವನೂರು ವರದಿ, ವೆಂಕಟಸ್ವಾಮಿ ಆಯೋಗ, ಚಿನ್ನಪ್ಪ ರೆಡ್ಡಿ ಆಯೋಗ, ದ್ವಾರಕನಾದ ಆಯೋಗ ಮುಂತಾದವುಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಪ್ರಸ್ತುತ ಲೇಖನದಲ್ಲಿ ಚಿತ್ರಿಸಲಾಗಿದೆ.

ಪ್ರತಿ ವರದಿಯ ಮುಖ್ಯಾಂಶಗಳು ಅದರ ರಚನೆ ರಚನೆಯಾಗಲು ಕಾರಣವಾದ ಅಂಶಗಳು ವರದಿಯ ಪರಿಣಾಮ ಅದರ ಮುಖ್ಯ ಅಂಶಗಳು ಇದರ ಪರಿಣಾಮದಿಂದಾಗಿ ಮುಂದೆ ಬಂದ ಆಯೋಗಗಳ ಕೊಡುಗೆಗಳನ್ನು ಇಲ್ಲಿ ತಿಳಿಸಲಾಗಿದೆ.

## KEYWORDS:

ಮೀಸಲಾತಿ, ಚಾತುರ್ವರ್ಣ ವ್ಯವಸ್ಥೆ, ಶೂದ್ರರು, ಸಾಹು ಮಹಾರಾಜ, ಮಿಲ್ಲರ್ ಆಯೋಗ, ಹಿಂದುಳಿದ ವರ್ಗಗಳ ಆಯೋಗ.

ಸಮಾಜದಲ್ಲಿ ಸಮಾನತೆಯನ್ನು ಸಾಧಿಸಲು ಹಲವು ಹಿಂದುಳಿದ ವರ್ಗಗಳು ಸಂಘ–ಸಂಸ್ಥೆಗಳು ಮತ್ತು ಹೋರಾಟಗಾರರು ಹಲವಾರು ರೀತಿಯಲ್ಲಿ ಚಳುವಳಿಗಳನ್ನು ಸ್ವಾತಂತ್ರಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರದಲ್ಲೂ ನಡೆಸುತ್ತ ಬಂದಿದ್ದಾರೆ. ಆದರೂ ಇನ್ನು ಹೇಳಿಕೊಳ್ಳುವಷ್ಟು ಸಮಾನತೆಯ ವಿಷಯದಲ್ಲಿ ಸಮಾನತೆಯನ್ನು ಕಂಡಿಲ್ಲ. ಒಂದು ಕಡೆ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರೆ ಡಾ. ಬಿ. ಆರ್. ಅಂಬೇಡ್ಕರ್ ರವರು ಹಿಂದುಳಿದವರ ದಲಿತರ ಮಹಿಳೆಯರ ಸಮಾನತೆ ಹಕ್ಕು ಮತ್ತು ಮೀಸಲಾತಿಗೆ ಹಗಲಿರುಳು ಹೋರಾಡುತ್ತಿದ್ದರು. ಇಂತಹ ಮೀಸಲಾತಿಯ ಇತಿಹಾಸವನ್ನು ನೋಡುವುದಾದರೆ ಹಲವು ದಶಕಗಳಿಂದ ಹೋರಾಟಗಳು ನಡೆಯುತ್ತಲೇ ಇವೆ.

“ಸಮಾನತೆಯೆಂದರೆ ಸಮಾನವಾಗಿರುವ ಜಾತಿಗಳಿಗೆ ಸಮಾನಾವಕಾಶವನ್ನು ಒದಗಿಸುವುದು. ಜಾತಿವಾರು ವರ್ಗೀಕರಣವು ಕಾನೂನಿನಲ್ಲಿ ಸಮಾನತೆಯ ಮೂಲಾಂಶವಾಗಿದೆ. ಸಮಾನ ಪರಿಸ್ಥಿತಿಗಳಲ್ಲಿರುವ ಜಾತಿಗಳಿಗೆ ಸಮಾನ ಅವಕಾಶವನ್ನು ಒದಗಿಸುವುದರಲ್ಲೇ ಸಮಾನತೆಯ ತತ್ವ ಅಡಗಿದೆ. ಅಸಮಾನ ಜಾತಿಗಳಿಗೆ ವಿಭಿನ್ನ ಅಥವಾ ವಿಶೇಷ ಅವಕಾಶ ಕಲ್ಪಿಸುವುದೇ ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ಸಮಾನತೆಯ ತತ್ವ. ಹಿಂದುಳಿದ ವರ್ಗಗಳಿಗೆ ಆದ್ಯತೆ ಮೇಲೆ ವಿಶೇಷ ಅವಕಾಶಗಳನ್ನು ನೀಡುವುದರಿಂದ ಮಾತ್ರವೇ ಎಲ್ಲರಿಗೂ ಸಮಾನ ಅವಕಾಶ ನೀಡಿದಂತಾಗುತ್ತದೆ”[1] ಎಂಬುದು ಎಲ್.ಜಿ. ಹಾವನೂರರ ಅಭಿಪ್ರಾಯವಾಗಿದೆ.

ಇತ್ತೀಚಿಗೆ ಬಿಡುಗಡೆಯಾದ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ರವರು ಪ್ರಕಟಿಸಿದ “ಮೀಸಲಾತಿ ಭ್ರಮೆ ಮತ್ತು ವಾಸ್ತವ” ಎಂಬ ಕೃತಿಯಲ್ಲಿ ಮೀಸಲಾತಿಯನ್ನು ಕುರಿತು “ಶತಮಾನಗಳ ಕಾಲ ನಮ್ಮ ದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರು ಜಾತಿವ್ಯವಸ್ಥೆಯಲ್ಲಿ ರಾಜಕೀಯ, ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಯನ್ನು ಅನುಭವಿಸಿಕೊಂಡು ಬಂದಿದ್ದಾರೆ. ಈ ಎಲ್ಲಾ ರೀತಿಯ ಅಸಮಾನತೆಯನ್ನು ಕೊನೆಗಾಣಿಸಿ ಸಮಾನತೆಯನ್ನು ತರುವುದು ನಮ್ಮ ಸಂವಿಧಾನದ ಮೂಲ ಉದ್ದೇಶ. ಇದು ಸಾಧ್ಯವಾಗಬೇಕಾದರೆ ಸರ್ಕಾರಗಳು ಇಚ್ಛಾಶಕ್ತಿ ಪ್ರದರ್ಶಿಸಿ ಇತರೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು”[2] ಎಂಬುದು ನ್ಯಾ. ನಾಗಮೋಹನದಾಸ್ ರವರ ವಾದವಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಹಿಂದುಳಿದ ವರ್ಗಗಳು ಮತ್ತು ಚಾತುರ್ವರ್ಣ ವ್ಯವಸ್ಥೆಯ ಹೊರಗಿದ್ದ ಜನಸಮುದಾಯಗಳು ಇಲ್ಲಿನ ಚಾತುರ್ವರ್ಣ ವ್ಯವಸ್ಥೆಯ ವಿರುದ್ಧ ನಡೆಸಿದ ಹೋರಾಟಗಳ ಚರಿತ್ರೆ; ಚಾತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರರು

ಹಾಗೂ ಚಾತುರ್ವರ್ಣ ವ್ಯವಸ್ಥೆಯ ಹೊರಗಿದ್ದ ಅತಿಶೂದ್ರ ಜನಸಮುದಾಯಗಳು ಅನುಭವಿಸುತ್ತಿದ್ದ ಅವಮಾನ, ಶೋಷಣೆ, ತಾರತಮ್ಯಗಳ ಹಿನ್ನೆಲೆಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿನ ಮೀಸಲಾತಿ ಪ್ರಶ್ನೆಯನ್ನು ಪರಿಶೀಲಿಸುವ ಅಗತ್ಯವಿದೆ. ಮೊದಲು ನಾವು ಗಮನಿಸಬೇಕಾದುದು ಇದು: ನಮ್ಮದು ಮೂಲತಃ ಅಸಮಾನತೆಯ, ಶ್ರೇಣೀಕರಣದ, ಪುರುಷ ಪ್ರಧಾನ ಸಮಾಜದಾಗಿದೆ. ಇದು ಚಾತುರ್ವರ್ಣ ಪ್ರಣಾಳಿಕೆ ನಿರ್ಮಿಸಿದ ವ್ಯವಸ್ಥೆಯಾಗಿದೆ. ಈ ಅಸಮಾನತೆ ವ್ಯವಸ್ಥೆಯ ವಿರುದ್ಧ ಲಾಗಾಯ್ತಿನಿಂದಲೂ ಭಾರತದಲ್ಲಿ ಸಾಮಾಜಿಕ ಹೋರಾಟಗಳು ನಡೆಯುತ್ತಾ ಬಂದಿವೆ. ಉದಾ, ಸಾಮಾನ್ಯ ಪೂರ್ವ ಶಕೆ 6ನೆಯ ಶತಮಾನದಲ್ಲಿ ಬುದ್ಧ ಮತ್ತು ಮಹಾವೀರ ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿ ತಮ್ಮದೇ ಧರ್ಮ ಸ್ಥಾಪಿಸಿದರು.

12ನೆಯ ಶತಮಾನದಲ್ಲಿ ಬಸವ ಪ್ರಣೀತ ಲಿಂಗಾಯತ ಚಳುವಳಿ ಈ ಚಳುವಳಿಯು ಸಮಾಜದಲ್ಲಿದ್ದ ಬ್ರಾಹ್ಮಣ್ಯದ ಪ್ರಾಬಲ್ಯ, ದಬ್ಬಾಳಿಕೆ, ಅಸ್ಪೃಶ್ಯತೆ, ಶೂದ್ರರು–ಅತಿಶೂದ್ರರಿಗೆ ಅಕ್ಷರ ಸಂಸ್ಕೃತಿಯ ನಿಷೇಧ, ಲಿಂಗ ಅಸಮಾನತೆ ಮುಂತಾದ ಸಾಮಾಜಿಕ ವಿಕೃತಿಗಳ ವಿರುದ್ಧ ಹೋರಾಟ ನಡೆಸಿತ್ತು, ಪ್ರಸಿದ್ಧ ಚಿಂತಕ ಎ.ಕೆ. ರಾಮಾನುಜನ್ ತಮ್ಮ ಸ್ಪೀಕಿಂಗ್ ಆಫ್ ಶಿವ ಕೃತಿಯಲ್ಲಿ "ವೀರಶೈವ ಚಳುವಳಿಯು ಬಡವರಿಂದ ಬಡವರಿಗಾಗಿ ನಡೆದ ಸಾಮಾಜಿಕ ವಿಪ್ಲವ, ಇದು ಶ್ರೀಮಂತರು ಮತ್ತು ಪ್ರತಿಷ್ಠಿತರ ವಿರುದ್ಧ ಕೆಳಜಾತಿಯವರು ಮತ್ತು ಅಸ್ಪೃಶ್ಯರು, ಅಕ್ಷರಸ್ಥ ಪಂಡಿತರ ವಿರುದ್ಧ ಅನಕ್ಷರಸ್ಥರು, ಶಿಲೆಯ ವಿರುದ್ಧ ರಕ್ತ–ಮಾಂಸ ನಡೆಸಿದ ದಂಗೆ"[3] ಎನ್ನುತ್ತಾರೆ.

ಹಾವನೂರ ವರದಿಯಲ್ಲಿ 12ನೇ ಶತಮಾನದ ಲಿಂಗಾಯತ ಚಳುವಳಿಯು ಸಮಾಜದ ಮೇಲೆ ಹೇಗೆ ಪ್ರಭಾವ ಬೀರಿತು ಎಂಬುದನ್ನು ಹೀಗೆ ವಿವರಿಸಲಾಗಿದೆ. 'ಬ್ರಾಹ್ಮಣಶಾಹಿ ವಿರುದ್ಧ ನಡೆದ 12ನೆಯ ಶತಮಾನದ ಕರ್ನಾಟಕದಲ್ಲಿ ನಡೆದ ಲಿಂಗಾಯತ ಚಳುವಳಿ ಮತ್ತು ಅದರ ಸಾಂಸ್ಕೃತಿಕ ಪ್ರಣಾಳಿಕೆಯು ಕರ್ನಾಟಕದಲ್ಲಿ ಬ್ರಾಹ್ಮಣೇತರಶಾಹಿ, ಅಥವಾ ಬ್ರಾಹ್ಮಣ ವಿರೋಧಿ ಚಳುವಳಿಗೆ ಅಡಿಪಾಯವನ್ನು ಒದಗಿಸಿತು'. ಈ ಚಳುವಳಿಯಲ್ಲಿ ಹಿಂದುಳಿದ ವರ್ಗಗಳ ಜೊತೆಯಲ್ಲಿ ಕೆಳಜಾತಿ ಮತ್ತು ಅಸ್ಪೃಶ್ಯ ಸಮುದಾಯಕ್ಕೆ ಸೇರಿದ್ದ ಅನೇಕ ಶರಣರಿದ್ದರು. ಇದನ್ನು ಸರಿಯಾಗಿಯೇ ರಾಮಾನುಜನ್ ಗುರುತಿಸಿದ್ದಾರೆ. ಇದಾದ ನಂತರ ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಮತ್ತೊಮ್ಮೆ ಹಿಂದುಳಿದವರ ಪರವಾಗಿ ಮತ್ತು ಅಸ್ಪೃಶ್ಯತೆ ವಿರುದ್ಧ ಚಳುವಳಿ ತಲೆಯೆತ್ತಿದ್ದು 19ನೆಯ ಶತಮಾನದ ಕೊನೆಯ ದಶಕಗಳಲ್ಲಿ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಹಿಂದುಳಿದ ವರ್ಗಗಳಿಗೆ ಮತ್ತು ಚಾತುರ್ವರ್ಣ

ವ್ಯವಸ್ಥೆಯ ಹೊರಗಿದ್ದ ಅತಿಶೂದ್ರರಿಗೆ ಉದ್ಯೋಗ, ಶಿಕ್ಷಣ ಮತ್ತು ರಾಜಕೀಯ ಅಧಿಕಾರಗಳಲ್ಲಿ ಮೀಸಲಾತಿ ನೀಡುವ ಕ್ರಮಗಳನ್ನು ಮತ್ತು ಅದಕ್ಕಾಗಿ ನಡೆದ ಹೋರಾಟಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಬಹುದು.

1. ಮಹಾತ್ಮ ಜ್ಯೋತಿರಾವ್ ಫುಲೆ (1827–1890) ಮತ್ತು ಸಾವಿತ್ರಿಬಾಯಿ ಫುಲೆ (1831=1897) ಅವರ ಸತ್ಯ ಶೋಧಕ ಸಮಾಜದ ಹೋರಾಟ.
2. ಕೊಲ್ಲಾಪುರ ಮಹರ್ಷಿ ಸಾಹು ಮಹಾರಾಜ್ (1874–1922) ಅವರ ಸಾಮಾಜಿಕ ಸುಧಾರಣೆಗಳು
3. ಕೇರಳದಲ್ಲಿನ ಶ್ರೀ ನಾರಾಯಣ ಗುರು (1856–1928) ನೇತೃತ್ವದ ಚಳುವಳಿ,
4. ಮದರಾಸ್ ಸಂಸ್ಥಾನದಲ್ಲಿನ ಜಸ್ಟೀಸ್ ಪಾರ್ಟಿ ನೇತೃತ್ವದ ಸುಧಾರಣೆಗಳು (1921–1936),
5. ಈ. ವಿ. ರಾಮಸ್ವಾಮಿ ನಾಯ್ಕರ್ (ಪೆರಿಯಾರ್) (1879–1973) (ವೆಂಕಟಪ್ಪ ರಾಮಸ್ವಾಮಿ)ನೇತೃತ್ವದ ಸೆಲ್ಫ್ ರೆಸ್ಪೆಕ್ಟ್ ಮೂವ್‌ಮೆಂಟ್.

ಈ ಐದು ಪ್ರಕರಣಗಳನ್ನು ಬ್ರಾಹ್ಮಣ್ಯದ ವಿರುದ್ಧ ಹಿಂದುಳಿದ ವರ್ಗಗಳು, ಅಂದರೆ ಬ್ರಾಹ್ಮಣೇತರರು ನಡೆಸಿದ ಹೋರಾಟ ಎಂದು ಹೇಳಬಹುದು. ಇದು ಕೇವಲ ಉದ್ಯೋಗಕ್ಕಾಗಿ, ಶಿಕ್ಷಣಕ್ಕಾಗಿ ಅಥವಾ ರಾಜಕೀಯ ಪ್ರಾತಿನಿಧ್ಯಕ್ಕಾಗಿ ನಡೆದ ಹೋರಾಟ ಮಾತ್ರವಾಗಿರಲಿಲ್ಲ. ಇದು ನಿಜಾರ್ಥದಲ್ಲಿ ಚಾತುರ್ವರ್ಣ ಪ್ರಣಾಳಿಕೆಯು ಸೃಷ್ಟಿಸಿದ್ದ ಅಸಮಾನತೆ ಮತ್ತು ದ್ವಿಜಶ್ರೇಷ್ಠತೆಗಳ ವಿರುದ್ಧದ ಹೋರಾಟವಾಗಿತ್ತು. ಇವೆಲ್ಲವೂ 19ನೆಯ ಶತಮಾನದ ಕೊನೆಯ 20ನೆಯ ಶತಮಾನದ ಆರಂಭದ ದಶಕಗಳಲ್ಲಿ ಹುಟ್ಟಿಕೊಂಡ ಚಳುವಳಿಗಳಾಗಿವೆ. ಈ ಎಲ್ಲಾ ಚಳುವಳಿಗಳು ಬ್ರಾಹ್ಮಣರ ಪ್ರಬಲ ವಿರೋಧವನ್ನು ಎದುರಿಸಿದ್ದವು. ಏಕೆಂದರೆ ಈ ಐದು ಹೋರಾಟಗಳು ಪ್ರಥಮದಲ್ಲಿ ಚಾತುರ್ವರ್ಣ ವ್ಯವಸ್ಥೆಗೆ ಮತ್ತು ಬ್ರಾಹ್ಮಣರ ಶ್ರೇಷ್ಠತೆಗೆ ಸವಾಲೊಡ್ಡಿದ್ದವು.

ಕ್ರಿಸ್ತಪೂರ್ವ 185 ಅಂದರೆ ಸುಮಾರು 2000 ವರ್ಷಗಳಿಂದಲೂ ಮನುವಾದಿಗಳು ನೂರಕ್ಕೆ ನೂರರಷ್ಟು ಮೀಸಲಾತಿಯನ್ನು ಅನುಭವಿಸುತ್ತಾ ಬಂದಿದ್ದಾರೆ. ಇದಕ್ಕೆ ಮೊದಲ ಬಾರಿಗೆ ಧಕ್ಕೆ ಬಂದಿದ್ದು ಮಹಾತ್ಮ ಜ್ಯೋತಿಬಾಫುಲೆಯವರಿಂದ. ಇವರು ಮೊದಲ ಬಾರಿಗೆ ಪೂನಾಃ ಪ್ರಾಂತದಲ್ಲಿ ಅಸ್ಪೃಶ್ಯ ಮಕ್ಕಳಿಗಾಗಿ ಶಾಲೆ ತೆರೆದು ಬ್ರಾಹ್ಮಣೇತರನ್ನೆಲ್ಲ ಸಂಘಟಿಸಿ 1873ರಲ್ಲಿ ಸತ್ಯಶೋಧಕ ಸಮಾಜದ ಮೂಲಕ ಹಂಟರ್ ಆಯೋಗಕ್ಕೆ ಮನವಿ ಸಲ್ಲಿಸಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು ಸರ್ಕಾರಿ ಹುದ್ದೆಯಲ್ಲಿ ಜಾತಿ ಜನಸಂಖ್ಯಾವಾರು ಪ್ರಾತಿನಿಧ್ಯನೀಡಲು ಕೋರಿದ್ದರು.

ಮೀಸಲಾತಿಗೆ ಒಂದು ತಾತ್ವಿಕ ಹೋರಾಟ ಸಿಕ್ಕಿದ್ದು ಮೈಸೂರು ಸಂಸ್ಥಾನದಿಂದ ಮೊದಲ ಬಾರಿಗೆ ಪ್ರಭುತ್ವವೊಂದು ಜನರ ಆಶಯಗಳಿಗೆ ಸ್ಪಂದಿಸಲು ತೊಡಗಿತ್ತು 1831ರಿಂದ 1881 ರವರೆಗೆ ಬ್ರಿಟಿಷ್ ಕಮಿಷನರುಗಳ ಕಾಲದಲ್ಲಿ ಆಡಳಿತದ ಎಲ್ಲಾ ಹಂತಗಳಲ್ಲಿ ಮದ್ರಾಸ್ ಬ್ರಾಹ್ಮಣರ ಪ್ರಾಬಲ್ಯ ಹೆಚ್ಚಾಗಿತ್ತು ಇದು ಮೈಸೂರು ಸ್ಥಳೀಯ ಬ್ರಾಹ್ಮಣರ ಅಸಮಾಧಾನಕ್ಕೆ ಕಾರಣವಾಗಿತ್ತು. ಇದು "ಮೈಸೂರಿಯನ್ಸ್ ವರ್ಸಸ್ ಮದರಾಸಿಗಳು"[5] ಎಂಬ ಕಾಲಾವಧಿಯಾಗಿತ್ತು. ಅದಕ್ಕಾಗಿ 1874ರಲ್ಲಿ ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನೀಡುವ ಕಮಿಷನರುಗಳ ಆಳ್ವಿಕೆಯು ಜಾರಿಗೆ ಬಂದಿತ್ತು. ಇಷ್ಟಾದರೂ ವಿವಿಧ ಸಮುದಾಯಗಳ ಪ್ರಾತಿನಿಧ್ಯವು ಉತ್ತಮವಾಗಿರಲಿಲ್ಲ ಈ ಹಿನ್ನೆಲೆಯಲ್ಲಿ 1895g ಜನವರಿ ತಿಂಗಳಲ್ಲಿ ಒಂದು ಸುತ್ತೋಲೆ ಹೊರಡಿಸಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಅರಮನೆ ಪ್ರಕಟಿಸಿತು. ಮುಂದೆ 1914ರಲ್ಲಿ ಹುದ್ದೆಗಳಿಗೆ ಸರ್ಕಾರವೇ ನಾಮಕರಣದ ಮೂಲಕ ನೇಮಕ ಮಾಡುವ ಕ್ರಮವನ್ನು ಜಾರಿಗೆ ತಂದಿತು ಆದರೆ ಆಡಳಿತ ವ್ಯವಸ್ಥೆಯಲ್ಲಿ ಬ್ರಾಹ್ಮಣರ ಪ್ರಾಬಲ್ಯವು ಮುಂದುವರೆದಿತ್ತು. ಒಟ್ಟು ಐದು ವೇತನ ಶ್ರೇಣಿಗಳ ಪಟ್ಟಿಯನ್ನು ವೇತನ ಶ್ರೇಣಿಯ ಆಧಾರದ ಮೇಲೆ ಬಿಡುಗಡೆ ಮಾಡಿದ್ದು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು 1916, 1917 ಮತ್ತು 1918ನೇ ಸಾಲಿನಲ್ಲಿ ಅತಿ ಹೆಚ್ಚು ಮೀಸಲಾತಿ ಅಂದರೆ ಶೇಕಡ 82 ರಷ್ಟು ಮೀಸಲಾತಿಯು ಬ್ರಾಹ್ಮಣರ ಪಾಲಾಗಿತ್ತು. ಇನ್ನುಳಿದ ಶೇಕಡ 18ರಷ್ಟು ಬ್ರಾಹ್ಮಣೇತರರಿಗೆ ಸಿಕ್ಕಿತ್ತು. ಇಲ್ಲಿ ಪುನಃ ಬ್ರಾಹ್ಮಣರಿಗೆ ಮತ್ತು ಬ್ರಾಹ್ಮಣೇತರರಿಗೆ ನಡುವೆ ಅಸಮಾನತೆ ಶುರುವಾಯಿತು.

ಈ ಹಿನ್ನೆಲೆಯಲ್ಲಿ ನಾಲ್ವಡಿ ರಾಜ ಒಡೆಯರು ಕೃಷ್ಣರಾಜ ಒಡೆಯರು 23 ಆಗಸ್ಟ್ 1918 ರಲ್ಲಿ ಲೆಸ್ಲಿ. ಸಿ. ಮಿಲ್ಲರ್ ನೇತೃತ್ವದಲ್ಲಿ ಆರು ಜನ ಸದಸ್ಯರು ಒಂದು ಸಮಿತಿಯನ್ನು ನೇಮಿಸಿತು. ಈ ಮಿಲ್ಲರ್ ಆಯೋಗದ ಶಿಫಾರಸಿನಂತೆ 1921ರಲ್ಲಿ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಮತ್ತು ಆಂಗ್ಲೋ ಇಂಡಿಯನ್ನರನ್ನು ಹೊರತುಪಡಿಸಿ ಶೇಕಡ 75ರಷ್ಟು ಮೀಸಲಾತಿಯನ್ನು ಜಾರಿಗೆ ತಂದರು.

ಮುಂದೆ ದೇಶದ ಹಲವು ಕಡೆಗಳಲ್ಲಿ ಮೀಸಲಾತಿ ಚಟುವಟಿಕೆಗಳು ಗರಿಗೆದರ ತೊಡಗಿದವು ಮಹಾತ್ಮ ಜ್ಯೋತಿಬಾ ಪುಲೆಯವರಿಂದ ಪ್ರಭಾವಿತರಾದ ಕೊಲ್ಲಾಪುರದ ಛತ್ರಪತಿ ಶಾಹು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳುವಳಿಯನ್ನು ಮುಂದುವರಿಸಿದರು.

1894ರಲ್ಲಿ ಕೊಲ್ಲಾಪುರದ ಸಂಸ್ಥಾನದ ಆಡಳಿತವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಕೊಲ್ಲಾಪುರ ಪ್ರಾಂತದ ಎಲ್ಲಾ ಕಚೇರಿಗಳಲ್ಲಿ ಬ್ರಾಹ್ಮಣೇತರರನ್ನು ನೇಮಿಸಲು ಪ್ರಾರಂಭಿಸಿದರು. ಇವರು ಹಿಂದುಳಿದವರ ಪರ ಒಲವುಳ್ಳವರಾಗಿದ್ದು

ಬ್ರಾಹ್ಮಣೇತರರಿಗೆ ವಿಶೇಷ ವಸತಿ ಶಾಲೆಗಳ ತೆರೆಯಬೇಕೆಂದು ಹಾಗೂ ಅವರಿಗೆ ಸಂಸ್ಥಾನದ ಸೇವೆಗಳಲ್ಲಿ 50ರಷ್ಟು ಉದ್ಯೋಗಗಳನ್ನು ಮೀಸಲಿಡಬೇಕೆಂದು ನಿರ್ಧರಿಸಿದರು. ಹಾಗಾಗಿ 1902 ಜುಲೈ 26ರಂದು ಬ್ರಾಹ್ಮಣೇತರರಿಗೆ ಶೇಕಡ 50ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿ ಆದೇಶ ಹೊರಡಿಸಿದರು. ಅದರ ಸಂಕ್ಷಿಪ್ತ ಸಾರಾಂಶ ಹೀಗಿದೆ" ಶಿಕ್ಷಣ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದಂತೆ ಸಂಸ್ಥಾನದ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವಿನ ವೈರುಧ್ಯವನ್ನು ಹೋಗಲಾಡಿಸಲು, ಹಿಂದುಳಿದ ವರ್ಗಗಳ ಏಳ್ಗೆಗಾಗಿ ಆಡಳಿತವು ಬಹುಮೊತ್ತದ ಉದ್ಯೋಗಗಳನ್ನು ಮೀಸಲಿಡಲು ನಿರ್ಧರಿಸಿದೆ. ಈ ಆಜ್ಞೆಯ ದಿನದಿಂದ ಶೇಕಡ 50ರಷ್ಟು ಉದ್ಯೋಗಗಳು ಹಿಂದುಳಿದ ವರ್ಗಗಳಿಂದಲೇ ಭರ್ತಿಯಾಗುತ್ತವೆ. ಎಲ್ಲಾ ವಿಭಾಗಗಳಲ್ಲಿ ಇನ್ನು ಮುಂದೆ ಹಿಂದುಳಿದ ವರ್ಗಗಳಿಗೆ ಶೇಕಡ 50 ರಷ್ಟು ಉದ್ಯೋಗಗಳನ್ನು ಮೀಸಲಿಡಲಾಗುವುದು. ಮೇಲ್ಜಾತಿಗಳ ಮಟ್ಟಕ್ಕೆ ಹಿಂದುಳಿದ ವರ್ಗಗಳನ್ನು ಮೇಲೆತ್ತುವ ಉದ್ದೇಶವನ್ನು ಈ ಆದೇಶವು ಹೊಂದಿದೆ"[4] ಎಂಬುದಾಗಿದೆ.

ನಂತರ 1920 ಮಾರ್ಚ್ 21 ಮತ್ತು 22ರಲ್ಲಿ ಕೊಲ್ಲಾಪುರದ ಮನಗಾಂವ್ ನಲ್ಲಿ ಒಂದು ಮಹರ್ ಸಮ್ಮೇಳನವನ್ನು ನಡೆಸಿ ಅಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ರವರನ್ನು ಈ ಜಗತ್ತಿಗೆ ಪರಿಚಯಿಸಿದರು. ಮೀಸಲಾತಿ ಇತಿಹಾಸದಲ್ಲಿ ಮೂರು ಮಹಾರಾಜರನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಆಗುತ್ತದೆ. ಅವರುಗಳೆಂದರೆ ಕೊಲ್ಲಾಪುರದ ಶಾಹು ಮಹಾರಾಜರು, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಗಾಯಕವಾಡ ಮಹಾರಾಜರು ಈ ಮೂರು ಮಹಾರಾಜರು ಪ್ರಜಾಸತಾತ್ಮಕ ಗುಣಗಳನ್ನು ಹೊಂದಿರುವ ರಾಜರುಗಳು. ಛತ್ರಪತಿ ಶಾಹು ಮಹಾರಾಜರು ಕೊಲ್ಲಾಪುರ ಪ್ರಾಂತದಲ್ಲಿ ಜಾರಿಗೆ ತಂದ ಮೀಸಲಾತಿ ಕಾನೂನಿನಿಂದ ಇವರ ಸಮಕಾಲೀನರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಪ್ರಾಂತ್ಯದಲ್ಲಿ ಮಿಲ್ಲರ್ ಆಯೋಗದ ಶಿಫಾರಸಿನ ಮೇರೆಗೆ ಶೇಕಡ 75 ರಷ್ಟನ್ನು ಮೀಸಲಾತಿಯನ್ನು ಜಾರಿಗೆ ತಂದರು. ಇದು ಕರ್ನಾಟಕ ಇತಿಹಾಸದಲ್ಲಿ ಮೊದಲ ಮೀಸಲಾತಿ ಕಾನೂನಾಗಿದೆ. ಮುಂದೆ ದೇಶಾದ್ಯಂತ ಬ್ರಾಹ್ಮಣೇತರರು ಜಾತಿ ಸಂಘಟನೆಗಳನ್ನು ಸಂಘಟಿಸಲು ಪ್ರಾರಂಭಿಸಿದರು. 1904 ರಲ್ಲಿ ಲಿಂಗಾಯತ ಒಕ್ಕೂಟ, 1906 ರಲ್ಲಿ ಒಕ್ಕಲಿಗರ ಸಂಘ, 1909ರಲ್ಲಿ ಮಾರ್ಲೆ–ಮಿಂಟೋ ಸುಧಾರಣೆಗಳ ಮೂಲಕ ಮೀಸಲಾತಿ, 1910 ರಲ್ಲಿ ಮಹಮದಿಯ ಒಕ್ಕೂಟ, 1911 ರಲ್ಲಿ ಮುಸ್ಲಿಮರ ಮನವಿಯ ಮೇರೆಗೆ ಬ್ರಿಟಿಷರು "ಜಾತಿವಾರು ಜನಗಣತಿ"ಯನ್ನು ನಡೆಸಿ ಅಸ್ಪೃಶ್ಯರು ಹಿಂದೂಗಳಲ್ಲವೆಂದು ಸಾಬೀತುಪಡಿಸಿದರು. ಇದರ ಆಧಾರದ ಮೇಲೆ ಡಾ. ಬಿ. ಆರ್. ಅಂಬೇಡ್ಕರ್ ರವರು 1918ರಲ್ಲಿ ಸೌತ್ ಬರೋ ಆಯೋಗದ ಮುಂದೆ ಶೋಷಿತವರ್ಗಗಳಿಗೆ ಮತದಾನದ ಹಕ್ಕು ಮತ್ತು ಪ್ರತ್ಯೇಕ ಚುನಾಯಕಗಳನ್ನು ನೀಡುವಂತೆ ಒತ್ತಾಯಿಸಿದರು.

ಆಗ 1919 ರ ಭಾರತ ಸರ್ಕಾರ ಕಾಯ್ದೆಯಡಿ ಶೋಷಿತ ವರ್ಗದವರಿಗೆ ಕೇಂದ್ರ ಮತ್ತು ಪ್ರಾಂತೀಯ ಪ್ರತಿನಿಧಿ ಮಂಡಳಿಗೆ ನಾಮಕರಣ ಮಾಡಲು ಅವಕಾಶ ಕಲ್ಪಿಸಲಾಯಿತು. 1928ರಲ್ಲಿ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರ ಮನವಿಯಂತೆ ಬ್ರಿಟಿಷ್ ಸದಸ್ಯರ ನೇತೃತ್ವದಲ್ಲಿ ಸೈಮನ್ ಕಮಿಷನ್ ಆಯೋಗವೊಂದನ್ನು ರಚಿಸಿತು. ಭಾರತದಲ್ಲಿ ಶೋಷಿತ ಸಮುದಾಯಗಳು ಹಾಗೂ ಹಿಂದುಳಿದ ಜಾತಿಗಳನ್ನು ಗುರುತಿಸುವುದು ಇದರ ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳ ಅಭಿವೃದ್ಧಿಗೆ ರೂಪಿಸಬೇಕಾದ ಯೋಜನೆಯ ಕುರಿತು ಅಧ್ಯಯನ ಮಾಡಿ ವರದಿ ನೀಡಲು ಈ ಆಯೋಗವನ್ನು ರೂಪಿಸಲಾಗಿತ್ತು ಆದರೆ ಗಾಂಧೀಜಿ ಮತ್ತು ಕಾಂಗ್ರೆಸ್ ಸಮಿತಿಯ ಇದನ್ನು ವಿರೋಧಿಸಿದ್ದು ಹಾಗೂ ದೇಶದಿಂದ ಇದರ ಸೈಮನ್ ಗೋ ಬ್ಯಾಕ್ ಎಂಬ ಪ್ರತಿಭಟನೆಗಳು ನಡೆದವು. ಸೈಮನ್ ಸಮಿತಿ ಯಂತೆ ದುಂಡುಮೇಜಿನ ಸಮ್ಮೇಳಗಳು ನಡೆದವು.

1930 ಮತ್ತು 1931ರ ದುಂಡುಮೇಜಿನ ಸಮ್ಮೇಳನಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ರವರು ಭಾಗವಹಿಸಿ ಅಸ್ಪೃಶ್ಯರು ಮತ್ತು ಹಿಂದುಳಿದ ಜಾತಿಗಳಿಗೆ ಪ್ರತ್ಯೇಕ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿದರು. 1935ರಲ್ಲಿ ಟ್ರಾವಂಕೂರ್ ಮಹಾರಾಜರು ಬಳಿಕ ಕೊಚ್ಚಿನ್ ಮಹಾರಾಜರು ಮೀಸಲಾತಿಯನ್ನು ಜಾರಿಗೊಳಿಸಿದರು. ಹಾಗೂ ಇದೇ ವರ್ಷ 1935ರಲ್ಲಿ ಭಾರತ ಸರ್ಕಾರದ ಕಾಯ್ದೆಯಡಿ ಮೀಸಲಾತಿಗೆ ಅವಕಾಶ ಕಲ್ಪಿಸಲಾಯಿತು. 1943 ರಲ್ಲಿ ದೇಶದ ರಾಯ್ ಕೌನ್ಸಿನಲ್ಲಿ ಕಾರ್ಮಿಕ, ಇಂಧನ ಮತ್ತು ನೀರಾವರಿ ಸಚಿವರಾಗಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶಾದ್ಯಂತ ಅಸ್ಪೃಶ್ಯರಿಗೆ ಮೊದಲು ಶೇಕಡ 8. 50 ರಷ್ಟು ಬಳಿಕ ಶೇಕಡ. 50ರಷ್ಟು ಮೀಸಲಾತಿಯನ್ನು ಜಾರಿಗೆ ತಂದರು.

ನಂತರದ ದಿನಗಳಲ್ಲಿ ಸ್ವಾತಂತ್ರ್ಯ ಭಾರತ ಮೊಟ್ಟಮೊದಲ ವರದಿ ಕಾಕಾ ಕಾಲೇಲ್ಕರ್ ವರದಿ. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ಅರಿಯಲು ಈ ಆಯೋಗವನ್ನು1953 ರಲ್ಲಿ ರಚಿಸಲಾಯಿತು. ಈ ವರದಿಯು 2399 ಜಾತಿಗಳ ಪಟ್ಟಿ ಮಾಡಿ 237 ಜಾತಿಗಳು ಅತಿ ಹಿಂದುಳಿದವೆಂದು ಹೇಳಿತು. ಮೈಸೂರು ರಾಜ್ಯ ಸರ್ಕಾರವು 1960ರಲ್ಲಿ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಮೀಸಲಾತಿ ನೀಡುವ ಸಲುವಾಗಿ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ವರದಿ ರಚಿಸಿತು. ಈ ವರದಿ ಅನ್ವಯಯ 2014 ಜಾತಿಗಳನ್ನು ಗುರುತಿಸಿ 135 ಜಾತಿಗಳು ತೀರಾ ಹಿಂದುಳಿದಿವೆ ಎಂದು ಹೇಳಿ ಶೇಕಡ 68ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿತು. ಕರ್ನಾಟಕ ಸರ್ಕಾರ ದೇವರಾಜ ಅರಸು ಅವರ ಕಾಲದಲ್ಲಿ ಹಿಂದುಳಿದ ಜಾತಿಗಳ ಮೀಸಲಾತಿಯನ್ನು ಪುನರ್ ವಿಮರ್ಶಿಸಲು 1970ರಲ್ಲಿ ಎಲ್. ಜಿ. ಹಾವನೂರು ಅವರನ್ನು ನೇಮಿಸಿತು ಈ ವರದಿಯು ಶೇಕಡ

50 ರಷ್ಟು ಮೀಸಲಾತಿಯನ್ನು ನೀಡಬೇಕೆಂದು ಶಿಫಾರಸ್ಸು ಮಾಡಿತು. 1978ರ ಡಿಸೆಂಬರ್ ತಿಂಗಳಲ್ಲಿ ಅಂದಿನ ಜನತಾ ಪಕ್ಷದ ಪ್ರಧಾನಿಯಾದ ಮುರಾರ್ಜಿ ದೇಸಾಯಿಯವರು ಬಿ. ಪಿ. ಮಂಡಲ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು ಈ ಸಮಿತಿ 11 ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಂಶಗಳನ್ನು ಬಳಸಿ ವರದಿ ತಯಾರಿಸಿತು. ಹಾಗೆ ಇತ್ತ ಕರ್ನಾಟಕದಲ್ಲಿ ಆಗಿಂದಾಗ್ಗೆ ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿದ ಎಲ್ಲಾ ಸಮುದಾಯಗಳು ಪ್ರತಿಭಟನೆಗೆ ಮುಂದಾದಾಗ ಅಂದಿನ ಸರ್ಕಾರವು 1983 ರಲ್ಲಿ ವೆಂಕಟಸ್ವಾಮಿ ಆಯೋಗವನ್ನು ರಚಿಸಿತು. ಈ ಆಯೋಗವು 1986ರಲ್ಲಿ ವರದಿ ನೀಡಿ ಶೇಕಡ 27ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿತು.

1988ರಲ್ಲಿ ಚಿನ್ನಪ್ಪರೆಡ್ಡಿ ಅವರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲಾಯಿತು ಇದು 1990 ರಲ್ಲಿ ತನ್ನ ವರದಿಯನ್ನು ನೀಡಿ ಹಿಂದುಳಿದ ಜಾತಿಗಳನ್ನು ಮೂರು ವರ್ಗ ಮಾಡಿ ಶೇಕಡಾ 28ರಷ್ಟು ಮೀಸಲಾತಿಯನ್ನು ಜಾರಿಗೆ ತರುವಂತೆ ಸೂಚಿಸಿತು. ಕರ್ನಾಟಕ ಸರ್ಕಾರವು 2002 ರವಿಕುಮಾರ್ ಆಯೋಗವನ್ನು ರಚಿಸಿತು. ಈ ಆಯೋಗವು ಬಡ್ತಿಮೀಸಲಾತಿಯನ್ನು ತೆಗೆದುಹಾಕಲು ಶಿಫಾರಸ್ಸು ಮಾಡಿತು ಮತ್ತು ಶೇಕಡ 50ರಷ್ಟು ನೇರ ನೇಮಕಾತಿ ಮಾಡಬೇಕೆಂದು ಹೇಳಿತು. ನಂತರ 2007ರಲ್ಲಿ ಸಿ. ಎಸ್. ದ್ವಾರಕನಾಥ್ ಅವರನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿತ್ತು. ಅಧ್ಯಕ್ಷರಾಗಿದ್ದ ಅಂತ್ಯದ ವೇಳೆಗೆ ಅಂದರೆ 07 ಜಲೈ 2010 ರಂದು ವರದಿ ನೀಡಿತು. ಹಾಗು ಇವರು ತಯಾರಿಸಿದ ವರದಿಯು ತುಂಬಾ ವ್ಯಾಪಕ ಮೆಚ್ಚುಗೆಗೆ ಪ್ರಾಪ್ತಿಯಾಯಿತು. 2005 ರಲ್ಲಿ ಎ. ಜೆ ಸದಾಶಿವ ಆಯೋಗವನ್ನು ರಚಿಸಲಾಯಿತು. ಈ ಆಯೋಗವು 2012 ರಲ್ಲಿ ಅಂತಿಮ ವರದಿ ಸಲ್ಲಿಸಿ ಪರಿಶಿಷ್ಟಜಾತಿಗಳಲ್ಲಿನ ಒಳ ಮೀಸಲಾತಿಯನ್ನು ಕುರಿತು ಹೇಳುತ್ತದೆ.

ಸದಾಶಿವ ಆಯೋಗದ ನಂತರ 2014 ರಲ್ಲಿ ಕಾಂತರಾಜ್ ಆಯೋಗವನ್ನು ರಚಿಸಲಾಯಿತು. ಈ ಆಯೋಗವು ಹಿಂದುಳಿದ ವರ್ಗಗಳ ಮಾತ್ರವಲ್ಲದೆ ಎಲ್ಲಾ ಸಮುದಾಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಿತು.

ಮೀಸಲಾತಿ ಎಂಬುದು ಸಾಮಾಜಿಕ ವ್ಯವಸ್ಥೆಯನ್ನು ಸರಿಯಾದ ಕ್ರಮದಲ್ಲಿ ಪುನರ್ ನಿರ್ಮಾಣ ಮಾಡುವುದಕ್ಕಾಗಿ ವಿಕಾಸನಗೊಂಡಿರುವ ಒಂದು ಸಮಾಜಶಾಸ್ತ್ರೀಯ ಶಾಸ್ತ್ರೀಯ ಪರಿಕಲ್ಪನೆಯಾಗಿದೆ ಮತ್ತು ಅದರ ಮೂಲಕ ಪ್ರಜಾಸತಾತ್ಮಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಮಹಿಳೆಯರು ಸೇರಿದಂತೆ ಎಲ್ಲರಿಗೂ ಮೀಸಲಾತಿ ಅಗತ್ಯವಿದೆ ಎಂಬುದು ಇದುವರೆಗೆ ನಡೆದ ಎಲ್ಲಾ ಸಮೀಕ್ಷೆಗಳ

ಅಭಿಪ್ರಾಯ ಕೂಡ ಆಗಿದೆ.

ಈ ಮೇಲಿನ ಎಲ್ಲಾ ವರದಿಗಳನ್ನು ಗಮನಿಸಿದಾಗ ಮೀಸಲಾತಿಯೇ ಅಂತಿಮ ಗುರಿಯಲ್ಲ ಬದಲಿಗೆ ಅಂತ್ಯದತ್ತ ಒಂದು ದಾರಿಯಷ್ಟೆ. ಇದರ ಮುಖ್ಯ ಉದ್ದೇಶವೇ ಮುಖ್ಯವಾಹಿನಿಯಿಂದ ಹೊರಗಿರುವವರಿಗೆ ಸರ್ವ ಕ್ಷೇತ್ರಗಳಲ್ಲಿಯೂ ಅವಕಾಶದ ಬಾಗಿಲುಗಳನ್ನು ತೆರೆಯುವುದಾಗಿ ಆದ್ದರಿಂದ ಮೀಸಲಾತಿ ಶಾಶ್ವತವಲ್ಲ, ಜಾತಿಪದ್ಧತಿಗೆ ದಿವ್ಯ ಔಷಧವಲ್ಲ. ಎಲ್ಲಿಯವರೆಗೆ ಜಾತಿ ಪ್ರಸ್ತಾಪ ಇರುತ್ತದೆಯೋ, ಎಲ್ಲಿಯವರೆಗೆ ಅಸಮಾನತೆ ಇರುತ್ತದೆಯೋ ಅಲ್ಲಿಯವರೆಗೆ ಇದು ಸಾಗಬೇಕಾಗುತ್ತದೆ.

**ಕೊನೆ ಟಿಪ್ಪಣಿಗಳು:**


1. ಹಾವನೂರರ ಎಲ್.ಜಿ., (1975), ಎಲ್.ಜಿ. ಹಾವನೂರರ ವರದಿ–1975, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು, ಪು.ಸಂ. ಮುನ್ನುಡಿ
2. ನಾಗಮೋಹನದಾಸ್ ಹೆಚ್.ಎನ್., (2022), ಮೀಸಲಾತಿ ಭ್ರಮೆ ಮತ್ತು ವಾಸ್ತವ, ಜನಪ್ರಕಾಶನ, ಬೆಂಗಳೂರು, ಪು.ಸಂ. ಹಿನ್ನುಡಿ
3. ಚಂದ್ರಶೇಖರ ಟಿ.ಆರ್., (2020), ಭಾರತದಲ್ಲಿ ಮೀಸಲಾತಿ ಇತಿಹಾಸ ಮತ್ತು ಮಿಲ್ಲರ್ ಸಮಿತಿ ವರದಿ: ಒಂದು ಅಧ್ಯಯನ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ಪು.ಸಂ. 19
4. ಕೃಷ್ಣಮೂರ್ತಿ ಚಮರಂ (ಸಂ), (2015), ಮೀಸಲಾತಿಯ ಮರ್ಮ, ಲಿಪಿ ಗ್ರಾಫ್ ಪ್ರಕಾಶನ, ಮೈಸೂರು, ಪು.ಸಂ. 35
5. ನಾಗ ಸಿದ್ದಾರ್ಥ ಹೊಲೆಯಾರ ಹೊ.ಬ., (2017), ಮೀಸಲಾತಿ ಮತ್ತು ಬಡ್ತಿ ಮೀಸಲಾತಿ, ಬೌದ್ಧ ಸಾಹಿತ್ಯ ಸಂಘ (ರಿ), ಮೈಸೂರು, ಪು.ಸಂ. 48

**ಪರಾಮರ್ಶನ ಗ್ರಂಥಗಳು:**

1. ಹಾವನೂರರ ಎಲ್.ಜಿ., (1975), ಎಲ್.ಜಿ. ಹಾವನೂರರ ವರದಿ–1975, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು.
2. ನಾಗಮೋಹನದಾಸ್ ಹೆಚ್.ಎನ್., (2022), ಮೀಸಲಾತಿ ಭ್ರಮೆ ಮತ್ತು ವಾಸ್ತವ, ಜನಪ್ರಕಾಶನ, ಬೆಂಗಳೂರು.
3. ಚಂದ್ರಶೇಖರ ಟಿ.ಆರ್., (2020), ಭಾರತದಲ್ಲಿ ಮೀಸಲಾತಿ ಇತಿಹಾಸ ಮತ್ತು ಮಿಲ್ಲರ್ ಸಮಿತಿ ವರದಿ: ಒಂದು ಅಧ್ಯಯನ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
4. ಕೃಷ್ಣಮೂರ್ತಿ ಚಮರಂ (ಸಂ), (2015), ಮೀಸಲಾತಿಯ ಮರ್ಮ, ಲಿಪಿ ಗ್ರಾಫ್ ಪ್ರಕಾಶನ, ಮೈಸೂರು.
5. ನಾಗ ಸಿದ್ದಾರ್ಥ ಹೊಲೆಯಾರ ಹೊ.ಬ., (2017), ಮೀಸಲಾತಿ ಮತ್ತು ಬಡ್ತಿ ಮೀಸಲಾತಿ, ಬೌದ್ಧ ಸಾಹಿತ್ಯ ಸಂಘ (ರಿ), ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.